ದಿನಾಂಕಃ 12-03-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಡಿ. ಬಿ. ಬಿ. ವಕೀಲರಿಂದಃ

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಆದರೆ ಆಂಗ್ಲ ಭಾಷೆ ಅಷ್ಟಾಗಿ ಓದಲು ಬರೆಯಲು ಬರುವುದಿಲ್ಲ. ನನಗೆ ಮದುವೆ ಆಗಿರುತ್ತದೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ನನ್ನ ತಾಯಿ ವಾಸ ಮಾಡಿಕೊಂಡಿರುತ್ತೇವೆ. ನನಗೆ ಇಬ್ಬರು ಮಕ್ಕಳು ಇರುತ್ತವೆ. ನಾನು ಪಡಿತರ ಚೀಟಿಯನ್ನು ಹೊಂದಿರುತ್ತೇನೆ. ಸದರಿ ಪಡಿತರ ಚೀಟಿಯಲ್ಲಿ ನನ್ನ, ನನ್ನ ತಾಯಿಯ, ನನ್ನ ಹೆಂಡತಿಯ ಹಾಗೂ ನನ್ನ ಮಕ್ಕಳ ಹೆಸರುಗಳು ಇರುತ್ತವೆ. ನನ್ನ ತಾಯಿಯ ಹೆಸರು ಲಕ್ಷ್ಮಮ್ಮ ಇರುತ್ತದೆ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಒಟ್ಟು ಕುಟುಂಬಕ್ಕೆ 9 ಎಕರೆ ಜಮೀನು ಇದ್ದು ನಾವು ವಿಭಾಗ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಒಬ್ಬ ಅಣ್ಣ ಇದ್ದು ಅವರು ಪ್ರತ್ಯೇಕವಾಗಿ ವಾಸ ಮಾಡಿಕೊಂಡಿರುತ್ತಾರೆ. 9 ಎಕರೆ ಜಮೀನಿಗೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ವ್ಯವಸಾಯಗಾರನಾಗಿರುತ್ತೇನೆ.

2. ನಾನು ನಾಗಮಂಗಲದ ಎಸ್.ಬಿ.ಐ. ನಲ್ಲಿ ಹಾಗೂ ಚೀಣ್ಯ ಗ್ರಾಮದ ಬ್ಯಾಂಕ್ ಆಫ್ ಬರೋಡ ದಲ್ಲಿ ಖಾತೆಗಳನ್ನು ಹೊಂದಿರುತ್ತೇನೆ. ನಮ್ಮ ಜಮೀನಿನಲ್ಲಿ ನಾವು ಸೌತೆ ಕಾಯಿ, ಟೊಮೆಟೋ ಹಾಗೂ ಬೀನ್ಸ್ ಬೆಳೆಗಳನ್ನು ಬೆಳೆಯುತ್ತೇವೆ. ನಾವು ಬೆಳೆದ ಬೆಳೆಗಳನ್ನು ನಾವು ಮೈಸೂರಿನ ಮತ್ತು ಬೆಂಗಳೂರಿನ ಎ.ಪಿ.ಎಂ.ಸಿ.ಗೆ ಸರಬರಾಜು ಮಾಡುತ್ತೇವೆ. ಸಾಕ್ಷಿ ಮುಂದುವರೆದು ಆ ರೀತಿ ನಾವು ಬೆಳೆಗಳನ್ನು ಸರಬರಾಜು ಮಾಡಿದಾಗ ಅವರು ಅದಕ್ಕೆ ಸಂಬಂಧಿಸಿದಂತೆ ನಮಗೆ ಒಂದು ಚೀಟಿಯನ್ನು ನೀಡುತ್ತಾರೆ ಮತ್ತು ನಮಗೆ ನೇರವಾಗಿ ಹಣ ಸಂದಾಯ ಮಾಡುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ನಾವು ಪಡೆದ ಹಣದ ಪೈಕಿ ಸ್ವಲ್ಪ ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡುತ್ತೇವೆ ಮತ್ತು ಉಳಿದ ಹಣದಲ್ಲಿ ಔಷಧಿ,

ಗೊಬ್ಬರ ಮತ್ತು ಇತರೆ ವಸ್ತುಗಳನ್ನು ಖರೀದಿ ಮಾಡುತ್ತೇವೆ. ಆ ರೀತಿ ನಾನು ನನ್ನ ಎರಡೂ ಬ್ಯಾಂಕ್ ಖಾತೆಗಳಿಗೆ ಹಣವನ್ನು ಜಮಾ ಮಾಡುತ್ತೇನೆ. ನಾನು ಸದರಿ ಬ್ಯಾಂಕ್ ಖಾತೆಗಳನ್ನು ಸುಮಾರು 20 ವರ್ಷಗಳಿಂದ ಹೊಂದಿರುತ್ತೇನೆ. ಬೆಳೆಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಒಟ್ಟು ಕುಟುಂಬದ ಎಲ್ಲಾ ಸದಸ್ಯರು ಸಮನಾಗಿ ಹಂಚಿಕೊಳ್ಳುತ್ತೇವೆ. 2021 ನೇ ಇಸವಿ ನವೆಂಬರ್ ತಿಂಗಳ ಸುಮಾರು ಎರಡೂವರೆ ತಿಂಗಳ ಹಿಂದೆ ನಾವು ಟೊಮೆಟೋ ಬೆಳೆಯಲು ನಾಟಿ ಮಾಡುತ್ತೇವೆ ಮತ್ತು ನವೆಂಬರ್ ತಿಂಗಳಿನಲ್ಲಿ ನಮಗೆ ಫಸಲು ಬರುತ್ತದೆ. 2021 ನೇ ಇಸವಿಯಲ್ಲಿ ನಾವು ಸುಮಾರು 8 ಸಾವಿರ ಟೊಮೆಟೋ ಗಿಡಗಳನ್ನು ನಾಟಿ ಮಾಡಿದ್ದೆವು. ಸದರಿ 8 ಸಾವಿರ ಸಸಿಗಳನ್ನು ಖರೀದಿ ಮಾಡಿದ್ದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ತಂದೆ ಈಗ್ಗೆ 15 ವರ್ಷಗಳ ಹಿಂದೆ ಮೃತ ಹೊಂದಿರುತ್ತಾರೆ. 2021 ನೇ ಇಸವಿಯಲ್ಲಿ ನಾವು ಟೊಮೆಟೋವನ್ನು ಹೊರತು ಪಡಿಸಿ ಬೇರೆ ಯಾವುದೇ ಬೆಳೆ ಬೆಳೆದಿರಲಿಲ್ಲ. ನಾವು ನಮ್ಮ ಜಮೀನಿನಲ್ಲಿ 3 ಕೊಳವೆ ಬಾವಿಗಳನ್ನು ಹೊಂದಿದ್ದು ಬೆಳೆ ಬೆಳೆಯಲು ಸದರಿ ಕೊಳವೆ ಬಾವಿಗಳ ನೀರನ್ನು ಉಪಯೋಗಿಸುತ್ತೇವೆ. ಸದರಿ ಕೊಳವೆ ಬಾವಿಗಳು ನಮ್ಮ ಜಮೀನಿನಲ್ಲಿ ಇರುವ ಬಗ್ಗೆ ನಾವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು.

3. ನಾನು ಹೇಳಿದಂತೆ ನಾನು ಆರೋಪಿಗೆ ಯಾವುದೇ ಟೊಮೆಟೋ ಮಾರಾಟ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ನಮ್ಮ ಊರಿನ ಕೃಷ್ಣೇಗೌಡರ ಮೂಲಕ ಪರಿಚಯ ಆಗಿರುತ್ತಾರೆ. ಆ ರೀತಿ ಪರಿಚಯ ಆದ ನಂತರ 2020 ನೇ ಇಸವಿಯಿಂದಲೂ ಆರೋಪಿ ನನ್ನಿಂದ ಟೊಮೆಟೋ ಖರೀದಿ ಮಾಡುವ ವ್ಯವಹಾರವನ್ನು ಮಾಡಿರುತ್ತಾರೆ. ನನ್ನ ಬ್ಯಾಂಕ್ ಖಾತಾ ನಕಲುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. 2020 ನೇ ಇಸವಿಯಲ್ಲಿ ನನಗೆ ಒಂದೂವರೆ ಲಕ್ಷ ರೂಪಾಯಿಗಳ ಆದಾಯ ಇತ್ತು. 2021 ನೇ ಇಸವಿಯಲ್ಲಿ ನಾನು ಬೆಳೆದಿದ್ದ ಟೊಮೆಟೋಗೆ ಒಂದು ಕ್ರೇಟ್ ಗೆ 2000/- ರೂಪಾಯಿಗಳ ಬೆಲೆ ಇತ್ತು. 2021 ರಲ್ಲಿ ನಾನು ಸುಮಾರು 5,000 ಕ್ರೇಟ್ ಟೊಮೆಟೋ ಬೆಳೆದಿದ್ದೆನು. 2022 ನೇ ಇಸವಿಯಿಂದ ಇಲ್ಲಿಯವರೆಗೆ ನಾನು ಸುಮಾರು 15 ಲಕ್ಷ ರೂಪಾಯಿ ಬೆಲೆ ಬಾಳುವ ಟೊಮೆಟೋವನ್ನು ಬೆಳೆದಿರುತ್ತೇನೆ. 2021 ನೇ ಇಸವಿಯಲ್ಲಿ ಆರೋಪಿಯೇ ನಮ್ಮ ಊರಿಗೆ ಬಂದು ನಾನು ಬೆಳೆದಿದ್ದ

ಟೊಮೆಟೋವನ್ನು ತೆಗೆದುಕೊಂಡು ಹೋಗಿದ್ದರು. ಆರೋಪಿಗೆ ನಾನು ಟೊಮೆಟೋ ಮಾರಾಟ ಮಾಡಿದ ಬಗ್ಗೆ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಲಿಖಿತ ದಾಖಲೆ ಆಗಿರಲಿಲ್ಲ. ನನ್ನ ಜಮೀನಿನಲ್ಲಿ ನಾನು ಟೊಮೆಟೋ ಬೆಳೆದಿದ್ದೆನು ಎಂದು ತೋರಿಸುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.